# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ/374/2017/ಎಆರ್ಇ–16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 05/04/2021.

## ವಿಚಾರಣಾ ವರದಿ

ಉಪಸ್ಥಿತರು: **ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಶ್ರೀ **ಐ. ಚಂದ್ರಶೇಖರ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಉಪ್ಪೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ:
1. **ಕಂಪ್ಲೆಂಟ್/ಉಪಲೋಕ್/ಎಂವೈಎಸ್–3007/2015/ಪಿಪಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ವರದಿ ದಿನಾಂಕ: 02–01–2017.**
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/37/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 18/02/2017.
3. ನಾಮ ನಿರ್ದೇಶನ ಸಂಖ್ಯೆ.ಉಪಲೋಕ್–2/ಡಿಇ–374/2017, ಬೆಂಗಳೂರು ದಿನಾಂಕ: 16.03.2017.
4. Note No.Uplok-1 & 2/DE/Transfers/ 2019, dated 07.02.2019.

* * * *

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರ ನಡವಳಿ ಸಂಖ್ಯೆ ಗ್ರಾಅಪ/37/ಗ್ರಾಪಂಕಾ/2017 ಬೆಂಗಳೂರು, ದಿನಾಂಕ 18/02/2017 ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಗೌರವಾನ್ವಿತ ಲೋಕಾಯುಕ್ತ ಸಂಸ್ಥೆಗೆ ವಹಿಸಿದ್ದು,

ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತ-2 ರವರ ನಾಮನಿರ್ದೇಶನ ಸಂಖ್ಯೆ ಉಪಲೋಕ್-2/ಡಿಇ/374/2017 ರಂತೆ ನೀವು ಎಂದರೆ ಶ್ರೀ **ಐ. ಚಂದ್ರಶೇಖರ್,** ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಉಪ್ಪೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ **ಆಪಾದಿತ ಸರ್ಕಾರಿ ನೌಕರ** ಎಂದು ಸಂಬೋಧಿಸಲ್ಪಡುವ) ರವರ ವಿರುದ್ಧ ದೋಷಾರೋಪಣೆ ತಯಾರು ಮಾಡಿ, ಜಾರಿ ಮಾಡಿ, ಇಲಾಖಾ ವಿಚಾರಣಾ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ನಂತರ, ಉಲ್ಲೇಖ-4 ರ ಆದೇಶದಂತೆ ಸದರಿ ವಿಚಾರಣೆಯು ಅಪರ ನಿಬಂಧಕರು, ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ವರ್ಗಾವಣೆಗೊಂಡಿರುತ್ತದೆ.

2) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ 27/09/2019 ರಂದು ಕಳುಹಿಸಲಾಗಿರುತ್ತದೆ ಹಾಗೂ ಸದರಿ ದೋಷಾರೋಪಣಾ ಪಟ್ಟಿಯನ್ನು ಆಪಾದಿತ ಸರ್ಕಾರಿ ನೌಕರರು ದಿನಾಂಕ 22/10/2019 ರಂದು ಪಡೆದುಕೊಂಡಿರುತ್ತಾರೆ. ಸದರಿ ದೋಷಾರೋಪಣಾ ಪಟ್ಟಿಯು ಈ ಕೆಳಕಂಡಂತಿರುತ್ತದೆ:-

## ಅನುಬಂಧ–1

## ದೋಷಾರೋಪಣೆ

ಶ್ರೀ ಐ. **ಚಂದ್ರಶೇಖರ** ಆದ ನೀವು, ಉಡುಪಿ ಜಿಲ್ಲೆ ಹಾಗೂ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಉಪ್ಪೂರು ಗ್ರಾಮ ಪಂಚಾಯತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ 2015 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಉಪ್ಪೂರು ಗ್ರಾಮದ ಸರ್ವೆ ನಂಬರ್ 318/8 ರಲ್ಲಿ 0.20 ಎಕರೆ ಜಮೀನನ್ನು ಶ್ರೀಮತಿ ಲಕ್ಷ್ಮೀ ಆಚಾರ್ತಿ ಎಂಬುವರ ಹೆಸರಿನಲ್ಲಿದ್ದು, ಸದರಿಯವರು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ಪಂಚಾಯಿತಿ ಕಛೇರಿಯಿಂದ ಪರವಾನಗಿಯನ್ನು ಪಡೆಯದೇ ಆವರಣ ಗೋಡೆಯನ್ನು ನಿರ್ಮಿಸಿದ್ದು, ಸದರಿ ಅತಿಕ್ರಮಣವನ್ನು ತೆರವುಗೊಳಿಸುವ ಸಂಬಂಧ ನೀವು ಇದುವರೆವಿಗೂ ಯಾವುದೇ ಕ್ರಮಕೈಗೊಳ್ಳದೆ ಸರ್ಕಾರಿ ಜಮೀನನ್ನು ಅತಿಕ್ರಮಿಸಿ ಅವರಣ ಗೋಡೆ ಕಟ್ಟುವಾಗ ನೀವು ಸಹಕರಿಸುವುದರ ಮೂಲಕ, ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

ದೂರುದಾರರಾದ ಶ್ರೀ ವಿಠ್ಠಲ ಶೆಟ್ಟಿ ಬಿನ್ ಲೇಟ್ ಸಂಕಯ್ಯ ಶೆಟ್ಟಿ, ನರ್‌ನಾಡು, ಉಪ್ಪೂರು ಗ್ರಾಮ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಈ ಸಂಸ್ಥೆಯಲ್ಲಿ ದೂರನ್ನು ಸಲ್ಲಿಸಿ ಉಡುಪಿ ತಾಲ್ಲೂಕಿನ ಉಪ್ಪೂರು ಗ್ರಾಮದ ಸರ್ವೆ ನಂ. 318/8 ರಲ್ಲಿನ 0.20 ಎಕರೆ ಜಮೀನು ಶ್ರೀಮತಿ ಲಕ್ಷ್ಮೀ ಆಚಾರ್ತಿ ಎಂಬುವರಿಗೆ ಸೇರಿದ್ದು, ಸದರಿಯವರು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ, ಪಂಚಾಯತಿಯ ಪರವಾನಗಿಯನ್ನು ಪಡೆಯದೆ ಆವರಣ ಗೋಡೆಯನ್ನು ನಿರ್ಮಿಸಿದ್ದು ಈ ಬಗ್ಗೆ ಮೌಖಿಕವಾಗಿ ಪಂಚಾಯತಿಗೆ ಕ್ರಮ ಜರುಗಿಸುವಂತೆ ಕೋರಿದ್ದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಆಪಾದಿಸಿರುತ್ತಾರೆ.

ಸದರಿ ಆಪಾದನೆಗೆ ಸಂಬಂಧಿಸಿದಂತೆ, ಎದುರುದಾರರಾದ ನೀವು ನಿಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ದೂರಿನಲ್ಲಿನ ಆಪಾದನೆಗೆ ಸಲ್ಲಿಸಿರುವ ಆಕ್ಷೇಪಣೆ, ದೂರುದಾರರು ಆಕ್ಷೇಪಣೆಗಳಿಗೆ ಸಲ್ಲಿಸಿರುವ ಪ್ರತ್ಯುತ್ತರ ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ:-

1. ಶ್ರೀಮತಿ ಲಕ್ಷ್ಮೀ ಆಚಾರ್ತಿ ಇವರು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ಆವರಣ ಗೋಡೆಯನ್ನು ಕಟ್ಟುತ್ತಿರುವಾಗ ನೀವು ಗೋಡೆ ಕಾಮಗಾರಿಯನ್ನು ಸ್ಥಗಿತಗೊಳಿಸುವ ಸಂಬಂಧ ಸೂಕ್ತ ಕ್ರಮಗಳನ್ನು ಕೈಗೊಂಡಿರುವುದಿಲ್ಲ.

2. ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ಅವರಣ ಗೋಡೆಯನ್ನು ಕಟ್ಟಿಕೊಳ್ಳಲು ನೀವು ಸಹಕರಿಸಿರುವುದು ನಿಮ್ಮ ಆಕ್ಷೇಪಣೆಯಿಂದ ದೃಢಪಟ್ಟಿರುತ್ತದೆ.

3. ಪಂಚಾಯತಿ ಕಛೇರಿಯಿಂದ ಪರವಾನಗಿ ಪಡೆಯದೆ ಆವರಣ ಗೋಡೆ ಕಟ್ಟಿರುವುದನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

4. ಸರ್ಕಾರಿ ರಸ್ತೆ ಅತಿಕ್ರಮಣ ಬಗ್ಗೆ ತಹಶೀಲ್ದಾರ್ ರವರಿಗೆ ಪತ್ರ ಬರೆದು ಸರ್ವೆ ಮಾಡಲು ತಿಳಿಸಿರುತ್ತೀರಿ.

ದೂರು, ಆಕ್ಷೇಪಣೆ ಮತ್ತು ಪ್ರತ್ಯುತ್ತರ ಹಾಗೂ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ಆವರಣ ಗೋಡೆ ಕಟ್ಟುವಾಗ ಯಾವುದೇ ಕ್ರಮಕೈಗೊಂಡಿರುವುದಿಲ್ಲ ಹಾಗೂ ಪಂಚಾಯತಿಯಿಂದ ಪರವಾನಗಿ ಪಡೆದುಕೊಂಡ ಬಗ್ಗೆ ಯಾವುದೇ ದಾಖಲಾತಿಗಳನ್ನು ಪರಿಶೀಲಿಸಿರುವುದಿಲ್ಲ ಹಾಗೂ ಅತಿಕ್ರಮಣದ ಬಗ್ಗೆ ಸರ್ವೆ ಮಾಡಲು ತಹಶೀಲ್ದಾರ್ ಇವರಿಗೆ ಪತ್ರ ಬರೆದಿರುವುದು, ಇವುಗಳನ್ನು ಗಮನಿಸಿದಾಗ ನೀವು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966 ರಡಿ ನಿಯಮ 3(1) ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ ಎದುರುದಾರರ ವಿರುದ್ದ ಶಿಸ್ತಿನ ಕ್ರಮಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 12 (3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಲೋಕಾಯುಕ್ತ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರಿಗೆ ವಹಿಸಲಾಗಿರುತ್ತದೆ. **ಆದ್ದರಿಂದ, ನಿಮ್ಮ ವಿರುದ್ಧ ಈ ಮೇಲ್ಕಂಡಂತೆ ದೋಷಾರೋಪಣೆ.**

3) ಈ ಮೇಲ್ಕಂಡ ದೋಷಾರೋಪಣೆ (Article of charge) ನ್ನು ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ, ಆ.ಸ.ನೌ.ರವರು ದಿನಾಂಕ 18.11.2019 ರಂದು ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಸದರಿಯವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ. ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ. ರವರು ತಮ್ಮ ಪರವಾಗಿ ದಿನಾಂಕ 18.11.2019 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ, ಸದರಿ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಸದರಿಯವರು ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿದ್ದರೆಂದು ತಿಳಿಸಿದ್ದರ ಮೇರೆಗೆ, ಆ ಕುರಿತು ಸರ್ವೆ ನಡೆಸಿ ವರದಿ ನೀಡುವಂತೆ ಬ್ರಹ್ಮಾವರ ತಹಶೀಲ್ದಾರ ರವರಿಗೆ ಸೂಕ್ತ ಪತ್ರ ರವಾನಿಸಿ ಮನವಿ ಮಾಡಿರುವುದಾಗಿ, ಸರ್ಕಾರಿ ಜಾಗ ಒತ್ತುವರಿಯಲ್ಲಿ, ಸದ್ರಿ ಒತ್ತುವರಿಯ ಅಧಿಕಾರ ವ್ಯಾಪ್ತಿಯು ಕಂದಾಯ ಇಲಾಖೆಗೆ ಬರುತ್ತದೆ ವಿನಹ: ಪಂಚಾಯತ್ ವ್ಯಾಪ್ತಿಗೆ ಬರುವುದಿಲ್ಲವೆಂದು, ಆದ್ದರಿಂದ, ತಾನು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವುದಿಲ್ಲವೆಂದು, ತಾನು ಸರ್ಕಾರಿ ಕೆಲಸವನ್ನು ಪ್ರಾಮಾಣಿಕವಾಗಿ ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸಿದ್ದು, ದುರ್ನಡತೆಯಿಂದ ನಡೆದುಕೊಂಡಿರುವುದಿಲ್ಲವೆಂದು, ಆದ್ದರಿಂದ, ತನ್ನನ್ನು ಈ ಆರೋಪದಿಂದ ಕೈಬಿಡುವಂತೆ ವಿನಂತಿಸಿರುತ್ತಾರೆ.

5) ಆಪಾದಿತ ಸರ್ಕಾರಿ ನೌಕರರು ವಿಚಾರಣೆಯ ಮಧ್ಯದಲ್ಲಿ ಗೈರುಹಾಜರಾಗಿದ್ದು ವಿಚಾರಣೆ ಮುಗಿಯುವವರೆಗೂ ವಿಚಾರಣೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ, ಆಪಾದಿತ ಸರ್ಕಾರಿ ನೌಕರರನ್ನು **ಏಕತರ್ಫಿ ಎಂದು ಪರಿಗಣಿಸಲಾಗಿರುತ್ತದೆ** ಹಾಗೂ ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

6) ಈ ವಿಚಾರಣೆಯಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು, ಪರಿಶೀಲನಾ ಅಧಿಕಾರಿಯಾದ ಶ್ರೀ **ಟಿ.ಎಸ್. ಗೋಪಿನಾಥ್,** ನಿವೃತ್ತ ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ–1 ಮತ್ತು ನಿ.ಪಿ–8 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

7) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, ದೂರುದಾರರಾದ ಶ್ರೀ ವಿಠ್ಠಲಶೆಟ್ಟಿ ಸಿಡಬ್ಲ್ಯೂ–1 ರವರಿಗೆ 84 ವರ್ಷ ವಯಸ್ಸಾಗಿದ್ದು, ಸದರಿಯವರು ತೀವ್ರ ಅನಾರೋಗ್ಯದಿಂದ ಬಳಲುತ್ತಿರುವುದರಿಂದ ಹಾಜರಾಗಿ ಸಾಕ್ಷಿ ನುಡಿಯಲು ಸಾದ್ಯವಾಗುವುದಿಲ್ಲವೆಂದು ವರದಿ ಸಲ್ಲಿಸಿದ್ದರಿಂದ, ಮಂಡನಾಧಿಕಾರಿಗಳು ದೂರುದಾರರನ್ನು ಕೈಬಿಟ್ಟು ಪರಿಶೀಲನಾಧಿಕಾರಿಗಳ ಸಾಕ್ಷ್ಯವನ್ನು ನುಡಿಸಿರುತ್ತಾರೆ.

8) ವಿಚಾರಣಾ ಪ್ರಾಧಿಕಾರದ ಪರವಾಗಿ ಮೌಖಿಕ ಮತ್ತು ದಸ್ತಾವೇಜುಗಳನ್ನು ಗುರುತಿಸಿಕೊಂಡ ನಂತರ, ಆ.ಸ.ನೌರವರು ಗೈರು ಹಾಜರಾಗಿರುವುದರಿಂದ, ದ್ವಿತೀಯ ಮೌಖಿಕ ಹೇಳಿಕೆ (Second Oral Statement) ಅನ್ನು ಪಡೆದುಕೊಳ್ಳಲಾಗಿರುವುದಿಲ್ಲ.

9) ಆ.ಸ.ನೌರವರು ಏಕತರ್ಫಿಯಾಗಿದ್ದು, ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

10) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವಿವಾದವನ್ನು ಆಲಿಸಲಾಯಿತು.

11) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

12) ವಾದವಿವಾದ ಆಲಿಸಿದ ನಂತರ ಕಡವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1**) ಸಕಾರಾತ್ಮಕವಾಗಿ.

**ಅಂಶ–2**) ಅಂತಿಮ ಆದೇಶದಂತೆ.

## ಕಾರಣಗಳು

14) **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌರವರ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಪರಿಶೀಲನಾ ಅಧಿಕಾರಿಯಾದ ಶ್ರೀ ಟಿ.ಎಸ್. ಗೋಪಿನಾಥ್, ನಿವೃತ್ತ ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ–1 ಮತ್ತು ನಿ.ಪಿ–8** ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

15) ಪಿಡಬ್ಲ್ಯೂ–1 ಶ್ರೀ ಟಿ.ಎಸ್. ಗೋಪಿನಾಥ್, ನಿವೃತ್ತ ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು (ಪರಿಶೀಲನಾಧಿಕಾರಿ) ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದಲ್ಲಿ ಕಡತವನ್ನು ಪರಿಶೀಲಿಸಿ, ಗೌರವಾನ್ವಿತ ಉಪಲೋಕಾಯುಕ್ತ–2 ರವರಿಗೆ ಲೋಕಾಯುಕ್ತ ಕಾಯ್ದೆ ಕಲಂ 12(3)ರಡಿಯಲ್ಲಿ ಅಂತಿಮ ಪರಿಶೀಲನಾ ಟಿಪ್ಪಣಿಯನ್ನು ಮಂಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

16) ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಸದರಿ ಪ್ರಕರಣದ ದೂರುದಾರರಾದ ಶ್ರೀ. ವಿಠ್ಠಲ ಶೆಟ್ಟಿ ರವರು ಲೋಕಾಯುಕ್ತ ಸಂಸ್ಥೆಗೆ ದೂರನ್ನು ಸಲ್ಲಿಸಿ ಉಡುಪಿ ಜಿಲ್ಲೆಯ, ಉಡುಪಿ ತಾಲ್ಲೂಕಿನ ಉಪ್ಪೂರು ಗ್ರಾಮದ ಸರ್ವೆ ನಂ:318/8ರ 0.20 ಎಕರೆ ಜಮೀನು ಶ್ರೀಮತಿ ಲಕ್ಷ್ಮೀ ಆಚಾರ್ತಿ ಇವರ ಸ್ವಾಧೀನದಲ್ಲಿದ್ದು, ಇದಕ್ಕೆ ಮಾಲೀಕರಾಗಿರುತ್ತಾರೆಂದು, ಸದರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಆವರಣ ಗೋಡೆಯನ್ನು ಕಟ್ಟಿದ್ದು, ಆವರಣ ಗೋಡೆಯನ್ನು ಕಟ್ಟಲು ಗ್ರಾಮ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದಿರುವುದಿಲ್ಲವೆಂದು ಹಾಗೂ ಸದರಿ ಜಮೀನಿನ ಮುಂದೆ ಹಾದು ಹೋಗುವ ರಸ್ತೆಯನ್ನು

ಸಹ ಅತಿಕ್ರಮಿಸಿ ಗೋಡೆಯನ್ನು ಕಟ್ಟಿರುತ್ತಾರೆಂದು, ಅದರೆ, ಈ ಬಗ್ಗೆ ಆಸನೌ ರವರಿಗೆ ಮೌಖಿಕವಾಗಿ ದೂರು ಸಲ್ಲಿಸಿದ್ದರೂ ಸಹ, ಯಾವುದೇ ಕ್ರಮವನ್ನು ಜರುಗಿಸಿರಲಿಲ್ಲವಾದ್ದರಿಂದ, ಈ ಬಗ್ಗೆ ಕ್ರಮವನ್ನು ಜರುಗಿಸಬೇಕೆಂದು ಕೋರಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

17) ಪಿಡಬ್ಲ್ಯೂ–1 ರವರ ಮುಂದುವರೆದ ಸಾಕ್ಷ್ಯದಲ್ಲಿ, ಸದರಿ ದೂರಿನ ಆಧಾರದ ಮೇಲೆ ಪ್ರಕರಣವನ್ನು ನೋಂದಾಯಿಸಿಕೊಂಡು ಈ ಸಂಸ್ಥೆಯಿಂದ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆಂದು, ದೂರುದಾರರು ನೀಡಿದ ದೂರಿನ ಆಧಾರದ ಮೇಲೆ ಆಸನೌರವರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಆಸನೌರವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದಾಗಿ, ಸದರಿ ದೂರಿನ ಪ್ರತಿಯನ್ನು **ನಿಪಿ–1 ಎಂದು, ಪ್ರಪತ್ರ 1 ಮತ್ತು 2**ನ್ನು **ನಿಪಿ–2 ಮತ್ತು ನಿಪಿ–3** ಎಂದು, ಆಸನೌರವರು ಸಲ್ಲಿಸಿದ ಆಕ್ಷೇಪಣೆಯನ್ನು **ನಿಪಿ–4** ಎಂದು ಗುರುತಿಸಿರುತ್ತಾರೆ. ಆಪಾದಿತ ಸರ್ಕಾರಿ ನೌಕರರು ತಮ್ಮ ಆಕ್ಷೇಪಣೆಯಲ್ಲಿ ಆವರಣ ಗೋಡೆಯನ್ನು ಈ ಹಿಂದೆಯೆ ಕಟ್ಟಲಾಗಿದ್ದು, ಇದು ತಮ್ಮ ಗಮನಕ್ಕೆ ಬಂದಿರುವುದಿಲ್ಲವೆಂದು ಹಾಗೂ ಕಟ್ಟಲಾಗಿರುವ ಆವರಣ ಗೋಡೆಯು ರಸ್ತೆಯನ್ನು ಅತಿಕ್ರಮಿಸಿ ಕಟ್ಟಲಾಗಿದೆಯೇ ಎಂದು ತಿಳಿಯಲು ಬ್ರಹ್ಮಾವರದ ತಹಶೀಲ್ದಾರ್ ರವರಿಗೆ ಪತ್ರ ಬರೆದು ಸರ್ವೆ ಕ್ರಮ ಜರುಗಿಸಬೇಕೆಂದು ಕೋರಿದ್ದಾಗಿ, ಸದರಿಯವರು ಜಾಗದ ಮಾಲೀಕರೆ ಅರ್ಜಿಯನ್ನು ಸಲ್ಲಿಸಿ, ಸರ್ವೆ ಮಾಡಲು ಕೋರಬೇಕೆಂದು ತಿಳಿಸಿದ ಕಾರಣ ಶ್ರೀಮತಿ. ಲಕ್ಷ್ಮೀ ಆಚಾರ್ತಿಯವರಿಗೆ ಪತ್ರದ ಮುಖೇನ ತಿಳಿಸಿ ಸರ್ವೆ ಮಾಡಲು ಕೋರಿಕೊಳ್ಳುವಂತೆ ತಿಳಿಸಲಾಗಿತ್ತೆಂದು, ಇದಲ್ಲದೇ ದೂರುದಾರರು ತಮ್ಮ ಮೇಲೆ ಮಾಡಿರುವ ಆಪಾದನೆಯು ಸತ್ಯಕ್ಕೆ ದೂರವೆಂದು, ತಮ್ಮ ಬಳಿ ಯಾವುದೇ ಮೌಖಿಕ ದೂರನ್ನು ದೂರುದಾರರು ಸಲ್ಲಿಸಿರಲಿಲ್ಲವೆಂದು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆಂದು ಪಿಡಬ್ಲ್ಯೂ–1 ರವರು ಸಾಕ್ಷ್ಯ ನುಡಿದಿರುತ್ತಾರೆ.

**18) ಪಿಡಬ್ಲ್ಯೂ-1 ರವರ ಮುಂದುವರೆದ ಸಾಕ್ಷ್ಯದಲ್ಲಿ,** ಸದರಿ ಹಂತದಲ್ಲಿ ದೂರುದಾರರ ದೂರಿನ ಅಂಶಗಳನ್ನು ಆಸನೌ ರವರು ಸಲ್ಲಿಸಿದ ಆಕ್ಷೇಪಣೆಯ ಅಂಶಗಳನ್ನು ಹಾಗೂ ಉಭಯತ್ರರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಆಸನೌರವರಿಗೆ ಶ್ರೀಮತಿ. ಲಕ್ಷ್ಮೀ ಆಚಾರ್ತಿ ರವರು ಆವರಣ ಗೋಡೆಯನ್ನು ಕಟ್ಟಲು ಪಂಚಾಯತಿಯಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಕಟ್ಟಿರುತ್ತಾರೆಂಬ ಅಂಶವು ಅವರ ಗಮನಕ್ಕೆ ಇತ್ತು ಎಂಬುದು ಸ್ಪಷ್ಟಪಟ್ಟಿರುತ್ತದೆಂದು, ಆದಾಗಿಯೂ ಸಹ **ಆಸನೌ ರವರು ಈ ಬಗ್ಗೆ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆಂದು** ಸಾಕ್ಷ್ಯ ನುಡಿದಿರುತ್ತಾರೆ.

19) ಪಿಡಬ್ಲ್ಯೂ-1 ರವರ ಮುಖ್ಯ ವಿಚಾರಣೆಯಲ್ಲಿ, ದೂರುದಾರರು ಮಾಹಿತಿ ಹಕ್ಕು ನಿಯಮದಡಿ ಆಸನೌರವರಿಗೆ ಅರ್ಜಿಯನ್ನು ಸಲ್ಲಿಸಿ ಪಂಚಾಯತಿ ವತಿಯಿಂದ ಲಕ್ಷ್ಮೀ ಆಚಾರ್ತಿ ರವರು ಆವರಣ ಗೋಡೆಯನ್ನು ಕಟ್ಟಲು ಪರವಾನಿಗೆ ಪಡೆದಿರುತ್ತಾರೆಯೆ? ಆಗಿದ್ದಲ್ಲಿ ಪರವಾನಿಗೆ ಪ್ರತಿ ಮತ್ತು ನಕ್ಷೆಗಳನ್ನು ನೀಡಬೇಕೆಂದು ಅರ್ಜಿ ಸಲ್ಲಿಸಿದ್ದಕ್ಕೆ, ಆಸನೌರವರು ದಿ: 23/05/2015 ರಂದು ಉತ್ತರವನ್ನು ನೀಡಿರುತ್ತಾರೆಂದು, ಸದರಿ ಉತ್ತರದ ಪ್ರತಿಯನ್ನು **ನಿಪಿ-5** ಎಂದು ಗುರುತಿಸಿರುತ್ತಾರೆ. ಸದರಿ ಪತ್ರದಲ್ಲಿ ಲಕ್ಷ್ಮೀ ಆಚಾರ್ತಿಯವರು ಆವರಣ ಗೋಡೆ ಕಟ್ಟಲು ಅರ್ಜಿ ಸಲ್ಲಿಸಿಲ್ಲವೆಂದು ತಿಳಿಸಿರುವುದು ಸ್ಪಷ್ಟಪಡುತ್ತದೆಂದು ನುಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿ ಆಸನೌರವರಿಗೆ ಶ್ರೀಮತಿ ಲಕ್ಷ್ಮೀ ಆಚಾರ್ತಿ ರವರು ಅಕ್ರಮವಾಗಿ ಆವರಣ ಗೋಡೆ ಕಟ್ಟಿರುತ್ತಾರೆಂಬ ಅಂಶವು ಗಮನಕ್ಕೆ ಬಂದಿರುತ್ತದೆಂಬುದು ಸ್ಪಷ್ಟವಾಗುತ್ತದೆ. ಇದಲ್ಲದೇ ದೂರುದಾರರಾದ ಶ್ರೀಮತಿ ಲಕ್ಷ್ಮೀ ಆಚಾರ್ತಿಯವರು ರಸ್ತೆಯನ್ನು ಅತಿಕ್ರಮಿಸಿ ಆವರಣ ಗೋಡೆ ಕಟ್ಟಿರುವ ಬಗ್ಗೆ ಛಾಯಾಚಿತ್ರಗಳನ್ನು ಮತ್ತು ಒಂದು ಸಿಡಿಯನ್ನು ಸಲ್ಲಿಸಿದ್ದು, ಅವುಗಳನ್ನು **ನಿಪಿ-6** (4 ಫೋಟೋ) ಎಂದು ಗುರುತಿಸಿಕೊಂಡಿರುತ್ತಾರೆ.

20) ಪಿಡಬ್ಲ್ಯೂ-1 ರವರ ಮುಂದುವರೆದ ಸಾಕ್ಷ್ಯದಲ್ಲಿ, ಆಸನೌ ರವರಿಗೆ ದಿ: 23/05/2015 ರಂದು ಅಕ್ರಮ ಆವರಣ ಗೋಡೆ ಕಟ್ಟಿರುವ ಬಗ್ಗೆ ಮಾಹಿತಿ ಇದ್ದರೂ ಸಹ, ತಡವಾಗಿ, ದಿ: 30/05/2016 ರಂದು ತಹಶೀಲ್ದಾರ್ ರವರಿಗೆ ಪತ್ರ ಬರೆದು ಆವರಣ ಗೋಡೆ ಕಟ್ಟಲು ಅತಿಕ್ರಮಿಸಲಾಗಿರುವ ಜಾಗವನ್ನು ಸರ್ವೆ ಮಾಡುವ ಬಗ್ಗೆ ಪತ್ರ ಬರೆದಿರುವುದು ದಿ: 25/06/2016ರ ತಹಶೀಲ್ದಾರ್ ರವರ ಪತ್ರದಿಂದ ಸ್ಪಷ್ಟವಾಗುತ್ತದೆ, ಸದರಿ ಪತ್ರವನ್ನು **ನಿಪಿ-7 ಎಂದು**, ಆಸನೌರವರು ಸುಮಾರು 1 ವರ್ಷಗಳ ಕಾಲ ಈ ಅಕ್ರಮ ಕಟ್ಟಡದ ಬಗ್ಗೆ ಯಾವುದೇ ಕ್ರಮ ಜರುಗಿಸದೆ ಇರುವುದು ಸ್ಪಷ್ಟವಾಗುತ್ತದೆ. ಸರ್ವೆ ನಂ. 318/8ರ ಜಮೀನು ಶ್ರೀಮತಿ ಲಕ್ಷ್ಮೀ ಆಚಾರ್ತಿ ಯವರ ಹೆಸರಿನಲ್ಲಿ ಇದ್ದ ಬಗ್ಗೆ ತೋರಿಸಲು ಪಹಣಿ ಪತ್ರಿಕೆಯನ್ನು **ನಿಪಿ-8** ಎಂದು ಗುರುತಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಆಸನೌರವರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸದೆ ಲೋಪವೆಸಗಿರುವುದು ದೃಢಪಟ್ಟಿರುತ್ತದೆಂದು ಪಿಡಬ್ಲ್ಯೂ-1 ರವರು ಸಾಕ್ಷ್ಯ ನುಡಿದಿರುತ್ತಾರೆ.

21) ನಿಶಾನೆ ಪಿ-1 ರಿಂದ ನಿಶಾನೆ ಪಿ-8 ರವರೆಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಪಿಡಬ್ಲ್ಯೂ-1 ರವರನ್ನು ಪಾಟೀ ಸವಾಲು ವಿಚಾರಣೆ ಮಾಡಿರುವುದಿಲ್ಲ ಮತ್ತು ಆಪಾದಿತ ಸರ್ಕಾರಿ ನೌಕರರು ಗೈರು ಹಾಜರಾಗಿದ್ದರಿಂದ ವಿಚಾರಣೆಯ ಮಧ್ಯದಲ್ಲಿ ಏಕಪಕ್ಷೀಯವೆಂದು ಪರಿಗಣಿಸಿ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

22) ಆಪಾದಿತ ಸರ್ಕಾರಿ ನೌಕರರ ಮೇಲೆ ಹೊರಿಸಲಾದ ಆರೋಪವೇನೆಂದರೆ, ಉಪ್ಪೂರು ಗ್ರಾಮದ ಸರ್ವೆ ನಂ. 318/8 ರಲ್ಲಿ 0.20 ಎಕರೆ ಜಮೀನನ್ನು ಶ್ರೀಮತಿ ಲಕ್ಷ್ಮೀ ಆಚಾರ್ತಿ ಎಂಬುವರ ಹೆಸರಿನಲ್ಲಿದ್ದು, ಸದರಿಯವರು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ಕಟ್ಟಡವನ್ನು ನಿರ್ಮಿಸಿದ್ದು, ಆ ಬಗ್ಗೆ ಪಂಚಾಯಿತಿ ಕಛೇರಿಯಿಂದ ಪರವಾನಗಿಯನ್ನು

ಪಡೆದುಕೊಂಡಿರುವುದಿಲ್ಲವೆಂದು, ಸದರಿ ಅತಿಕ್ರಮಣವನ್ನು ತೆರವುಗೊಳಿಸುವ ಸಂಬಂಧ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಹಾಗೂ ಸರ್ಕಾರಿ ಜಮೀನನ್ನು ಅತಿಕ್ರಮಿಸಿ ಆವರಣ ಗೋಡೆ ಕಟ್ಟುವಾಗ ಆ.ಸ.ನೌ ರವರು ಸಹಕರಿಸುವ ಮೂಲಕ ದುರ್ನಡತೆ/ಕರ್ತವ್ಯ ಲೋಪವೆಸಗಿರುತ್ತಾರೆಂಬುದಾಗಿರುತ್ತದೆ.

23) ಮಂಡನಾಧಿಕಾರಿಗಳು ಆರೋಪವನ್ನು ರುಜುವಾತುಪಡಿಸಲು ಪ್ರಕರಣದ ಪರಿಶೀಲನಾಧಿಕಾರಿಯಾದ ಶ್ರೀ ಟಿ.ಎಸ್. ಗೋಪಿನಾಥ್, ನಿವೃತ್ತ ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ಪಿ.ಡಬ್ಲ್ಯೂ-1 ಎಂದು ಸಾಕ್ಷಿ ನುಡಿಸಿಕೊಂಡು, ನಿ.ಪಿ-1 ಮತ್ತು ನಿ.ಪಿ-8 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

24) ಪಿಡಬ್ಲ್ಯೂ-1/ಪರಿಶೀಲನಾಧಿಕಾರಿ ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಕೆಳಕಂಡಂತೆ ಸಾಕ್ಷ್ಯ ನುಡಿದಿರುತ್ತಾರೆ:-

" ಆಪಾದಿತ ಸರ್ಕಾರಿ ನೌಕರ ರವರು ಸುಮಾರು 1 ವರ್ಷಗಳ ಕಾಲ ಈ ಅಕ್ರಮ ಕಟ್ಟಡದ ಬಗ್ಗೆ ಯಾವುದೇ ಕ್ರಮ ಜರುಗಿಸದೆ ಇರುವುದು ಸ್ಪಷ್ಟಪಟ್ಟಿರುತ್ತದೆ. ಆ.ಸ.ನೌ ರವರು ತಮ್ಮ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸ್ಪಷ್ಟಪಟ್ಟಿರುತ್ತದೆ. ಆದ್ದರಿಂದ ಸದರಿಯವರ ವಿರುದ್ಧ ಅಂತಿಮ ಪರಿಶೀಲನಾ ಟಿಪ್ಪಣಿಯನ್ನು ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ಮಂಡಿಸಿರುವುದಾಗಿ " ನುಡಿದಿರುತ್ತಾರೆ.

25) ಆ.ಸ.ನೌ.ರವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಕಂದಾಯ ಇಲಾಖೆಯ ತಹಶೀಲ್ದಾರ್ ರವರಿಗೆ ಪತ್ರ ಬರೆದಿರುವುದಾಗಿ, ಸದರಿ ಅತಿಕ್ರಮಣವನ್ನು ತೆರವುಗೊಳಿಸುವುದು ಕಂದಾಯ

**ಇಲಾಖಾ ವ್ಯಾಪ್ತಿಗೆ ಬರುವುದಾಗಿ ಹೇಳಿರುತ್ತಾರೆ. ಈ ಹಿಂದೆ ಈ ಅಕ್ರಮ ಕಟ್ಟಡದ ಬಗ್ಗೆ ಸದರಿ ಶ್ರೀಮತಿ ಲಕ್ಷ್ಮೀ ಅಚಾರ್ತಿಯವರಿಗೆ ಕಾರಣ ಕೇಳಿ ನೋಟಿಸ್ ನೀಡಿರುವುದಾಗಿ ಹೇಳಿರುತ್ತಾರೆ. ಆದರೆ, ಸದರಿ ನೋಟಿಸಿನನ್ವಯ ಮುಂದುವರೆದು, ಕಾನೂನು ಕ್ರಮ ಜರುಗಿಸಿರುವುದಿಲ್ಲವೆಂಬುದು ಕಂಡುಬರುತ್ತದೆ. ಈ ಆ.ಸ.ನೌರವರು ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷಿಯನ್ನಾಗಲೀ ಅಥವಾ ದಾಖಲೆಗಳನ್ನಾಗಲೀ ಗುರುತಿಸಿಕೊಂಡಿರುವುದಿಲ್ಲ. ವಿಚಾರಣೆಯ ಮಧ್ಯದಲ್ಲಿ ಏಕತರ್ಫಿಯಾಗಿದ್ದು, ಪಿಡಬ್ಲ್ಯೂ-1 ರವರ ಪಾಟೀ ಸವಾಲು ವಿಚಾರಣೆಯನ್ನು ಮಾಡಿರುವುದಿಲ್ಲ. ಆ.ಸ.ನೌ ರವರು ತನ್ನ ಮೇಲಿನ ಆಪಾದನೆಯನ್ನು ನಿರಾಕರಿಸಲು ಪೂರಕ ಸಾಕ್ಷ್ಯಾಧಾರಗಳನ್ನು ನೀಡದೆ ವಿಫಲರಾಗಿ ಏಕತರ್ಫಿಯಾಗಿರುತ್ತಾರೆ** ಮತ್ತು ಈ ಪ್ರಕರಣದಲ್ಲಿ ಪಿ.ಡಬ್ಲ್ಯೂ-1 ರವರ ಪಾಟೀ ಸವಾಲು ವಿಚಾರಣೆಗೆ ಒಳಪಡಿಸದೇ, ಏಕತರ್ಫಿಯಾಗಿರುವುದನ್ನು ಪರಿಶೀಲಿಸಿದಾಗ, ಆ.ಸ.ನೌರವರು ದುರ್ನಡತೆಯುಳ್ಳ ಸ್ವಭಾವದವರಿರುವುದು ಕಂಡು ಬರುತ್ತದೆ.

26) ಈ ಎಲ್ಲಾ ಕಾರಣಗಳಿಂದ ಆ.ಸ.ನೌರವರು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

27) ಆ.ಸ.ನೌ ರವರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1) ರಡಿಯಲ್ಲಿ, ಆ.ಸ.ನೌ ರವರು ಕರ್ತವ್ಯ ಲೋಪ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರರಾದ **ಶ್ರೀ ಐ. ಚಂದ್ರಶೇಖರ, ಪಂಚಾಯತ್ ಅಭಿವೃದ್ಧಿ ಅಧಿಕಾರಿ,** ಉಪ್ಪೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ರವರ ವಿರುದ್ಧ ಹೊರಿಸಲಾದ ಆರೋಪವಾದ ಉಪ್ಪೂರು ಗ್ರಾಮದ ಸರ್ವೆ ನಂ. 318/8 ರಲ್ಲಿ 0.20 ಎಕರೆ ಜಮೀನು ಶ್ರೀಮತಿ ಲಕ್ಷ್ಮೀ ಆಚಾರ್ಯ ಎಂಬುವರ ಹೆಸರಿನಲ್ಲಿದ್ದು, ಸದರಿಯವರು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ, ಪಂಚಾಯಿತಿ ಕಛೇರಿಯಿಂದ ಪರವಾನಗಿಯನ್ನು ಪಡೆಯದೇ ಆವರಣ ಗೋಡೆಯನ್ನು ನಿರ್ಮಿಸಿದ್ದು, ಸದರಿ ಅತಿಕ್ರಮಣವನ್ನು ತೆರವುಗೊಳಿಸುವ ಸಂಬಂಧ **ಯಾವುದೇ ಕ್ರಮಕೈಗೊಳ್ಳದೆ, ಸರ್ಕಾರಿ ಜಮೀನನ್ನು ಅತಿಕ್ರಮಿಸಿ ಆವರಣ ಗೋಡೆ ಕಟ್ಟುವಾಗ ಸಹಕರಿಸುವ ಮೂಲಕ ಕರ್ತವ್ಯಲೋಪವೆಸಗಿರುವುದನ್ನು ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**5 ನೇ ಏಪ್ರಿಲ್ 2021.**

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## KARNATAKA LOKAYUKTA

No.UPLOK-2/DE/374/2017/ARE-16

Multi Storied Building,
Dr. B.R. Ambedkar Veedhi,
Bengaluru-560 001.
Dated 06.04.2021.

## RECOMMENDATION

Sub:- Departmental inquiry against Sri I.Chandrashekar, Panchayath Development Officer, Uppuru Grama Panchayath, Udupi Taluk and District- reg.

Ref:- 1) Government Order No.RDP 37 GPS 2017 Dated 18.02.2017.

2) Nomination order No. UPLOK-2/ DE/374/2017 dated 16.03.2017 of Upalokayukta, State of Karnataka.

3) Inquiry report dated 01.04.2021 of Additional Registrar of Enquiries-16, Karnataka Lokayukta, Bengaluru.

~~~~~

The Government by its order dated 18.02.2017 initiated the disciplinary proceedings against Sri I.Chandrashekar, Panchayath Development Officer, Uppuru Grama Panchayath, Udupi Taluk and District, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination Order No. UPLOK-2/ DE/374/2017 dated 16.03.2017 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, by order No.Uplok-1&2/DE/Transfers/2019 dated 07.02.2019, the Additional Registrar of Enquiries-16, Karnataka Lokayukta, Bengaluru, was re-nominated as the Inquiry Officer to continue the said departmental inquiry against DGO.

3. The DGO Sri I.Chandrashekar, Panchayath Development Officer, Uppuru Grama Panchayath, Udupi Taluk and District, was tried for the following charges :-

> " ಐ. ಚಂದ್ರಶೇಖರ ಆದ ನೀವು ಉಡುಪಿ ಜಿಲ್ಲೆ ಹಾಗೂ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಉಪ್ಪೂರು ಗ್ರಾಮ ಪಂಚಾಯತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ 2015ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವದಿಯಲ್ಲಿ ಉಪ್ಪೂರು ಗ್ರಾಮದ ಸರ್ವೆ ನಂಬರ್ 318/8ರಲ್ಲಿ 0.20 ಎಕರೆ ಜಮೀನನ್ನು ಶ್ರೀಮತಿ ಲಕ್ಷ್ಮೀ ಆಚಾರ್ಯ ಎಂಬವರ ಹೆಸರಿನಲ್ಲಿದ್ದು, ಸದರಿಯವರು ಸರ್ಕಾರಿ ರಸ್ತೆಯನ್ನು ಅತಿಕ್ರಮಿಸಿ ಪಂಚಾಯಿತಿ ಕಛೇರಿಯಿಂದ ಪರವಾನಗಿಯನ್ನು ಪಡೆಯದೇ ಆವರಣ ಗೋಡೆಯನ್ನು ನಿರ್ಮಿಸಿದ್ದು, ಸದರಿ ಅತಿಕ್ರಮಣವನ್ನು ತೆರವುಗೊಳಿಸುವ ಸಂಬಂಧ

ನೀವು ಇದುವರೆವಿಗೂ ಯಾವುದೇ ಕ್ರಮಕ್ಕೈಗೊಳ್ಳದೆ ಸರ್ಕಾರಿ ಜಮೀನನ್ನು ಅತಿಕ್ರಮಿಸಿ ಆವರಣ ಗೋಡೆ ಕಟ್ಟುವಾಗ ನೀವು ಸಹಕರಿಸುವುದರ ಮೂಲಕ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ. "

4. The Inquiry Officer (Additional Registrar of Enquiries-16) on proper appreciation of oral and documentary evidence has held that, the above charge against the DGO Sri I.Chandrashekar, Panchayath Development Officer, Uppuru Grama Panchayath, Udupi Taluk and District, is ' proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of the DGO recorded by the Enquiry Officer, DGO Sri I.Chandrashekar has retired from service on 31-07-2018.

7. Having regard to the nature of charge *'proved'* against the DGO and considering the totality of circumstances, it is hereby recommended to the Government to impose penalty of 'withholding 5% (five) of pension payable to DGO Sri I.Chandrashekar, for a period of two years.'

8. Action taken in the matter shall be intimated to this Authority.

Connected records are enclosed herewith.

6/4

**(JUSTICE B.S.PATIL)**
**Upalokayukta,**
**State of Karnataka.**

*BS**